# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 207 | Pages. 2 | Date: 26-06-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 207 - ಪುಟಗಳು : 2 - 26 ಜೂನ್ 2025 ಗುರುವಾರ Ph: 8762954248 ದರ : ₹1


# ಮಲೆನಾಡಿನಲ್ಲಿ ಮುಂದುವರೆದ ಮಳೆ ಅನಾಹುತ

## ಭೂ ಕುಸಿತ ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ | ಹಲವೆಡೆ ಮನೆ ಕುಸಿತ, ವಿದ್ಯುತ್ ಕಂಬ ಧರೆಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಲೆನಾಡಿನಲ್ಲಿ ವ್ಯಾಪಕ ಮಳೆ ಸುರಿಯುತ್ತಿದ್ದು ಮಳೆ-ಗಾಳಿ ಹಿನ್ನೆಲೆಯಲ್ಲಿ ಜನ ಜೀವನ ಸಂಪೂರ್ಣ ಅಸ್ತವಸ್ತಗೊಂಡಿದೆ.

ತಾಲ್ಲೂಕಿನಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿದ್ದು ಸಂಪೂರ್ಣವಾದ ಶೀತದ ವಾತಾವರಣ ಮೂಡಿದೆ. ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯಲ್ಲಿ ಹೆತ್ತೂರು (180.09 ಮಿ.ಮೀ.), ಹಾನುಬಾಳ್ (110.5.ಮೀ.) ಮತ್ತು ಯಸಳೂರು (109.3 ಮಿ.ಮೀ.), ಬೆಳಗೋಡು (58.7 ಮಿ.ಮೀ) ಹಾಗೂ ಕಸಬಾ (102.1ಮಿ.ಮೀ) ಮಳೆ ಸುರಿದಿದೆ.

ತಾಲ್ಲೂಕಿನ ಪ್ರತಿ ಹೋಬಳಿಯಲ್ಲೂ ಜೋರು ಮಳೆಯಾಗುತ್ತಿದ್ದು ಮಳೆಯಿಂದ ಜನಜೀವನ ಅಸ್ತವಸ್ಯಗೊಂಡಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ, ತಡೆಗೋಡೆ ಕುಸಿತ, ರಸ್ತೆಗಳೆಲ್ಲ ಜಲಾವೃತ, ವಿದ್ಯುತ್ ಕಂಬಗಳು ಬಿದ್ದಿರುವುದು ಸಾಮಾನ್ಯವಾಗಿದೆ. ಮಳೆ ಇನ್ನು ಎರಡು ತಿಂಗಳು ಮುಂದುವರೆಯಲಿದ್ದು ಇದೇ ರೀತಿ ಮಳೆ ಮುಂದುವರೆದರೆ ಮತ್ತಷ್ಟು ಹಾನಿ ಸಂಭವಿಸುವ ಆತಂಕ ಕಾಡುತ್ತಿದೆ.

ಬುಧವಾರ ಮಧ್ಯಾಹ ನಂತರ ಮಳೆಯ ಪ್ರಮಾಣ ಮತ್ತಷ್ಟು ಹೆಚ್ಚಿದೆ. ಮಳೆಯಿಂದಾಗಿ ತಾಲ್ಲೂಕಿನಲ್ಲಿ ಕಳೆದ 2 ದಿನಗಳಿಂದ ಅಂಗನವಾಡಿ ಹಾಗು ಶಾಲೆಗಳಿಗೆ ರಜೆ ಘೋಷಿಸಿದ್ದು ಗುರುವಾರ ಸಹ ರಜೆ ಮುಂದುವರೆದಿದೆ.



### ಹೆದ್ದಾರಿಯಲ್ಲಿ ಮುಂದುವರೆದ ಅನಾಹುತ

ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಕೊಲ್ಲಹಳ್ಳಿ ಸಮೀಪ ತಡೆಗೋಡೆ ಕುಸಿಯುವ ಆತಂಕ ಇದ್ದು ಮಳೆ ಮುಂದುವರಿದರೆ ಕುಸಿಯುವ ಸಾಧ್ಯತೆ ಹೆಚ್ಚಾಗಿದೆ. ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ತಡೆಗೋಡೆ ಕೆಳಗೆ ಕೆರೆಯಿದ್ದು ತಡೆಗೋಡೆಯನ್ನು ಕಲ್ಲುಗಳಿಂದ ಮಾಡಲಾಗಿದೆ. ಗೋಡೆ ಕುಸಿದರೆ ಹೆದ್ದಾರಿಗೂ ಹಾನಿ ಸಾಧ್ಯತೆಯಿದೆ. ವಳಲಹಳ್ಳಿ ಗ್ರಾಮದ ಗಣೇಶ್ ಎಂಬುವರ ಮನೆ ಬಳಿ ನಿರ್ಮಿಸಿದ್ದ ತಡೆ ಗೋಡೆ ಕುಸಿದು ಪಕ್ಕದಲ್ಲಿದ್ದ ವಿದ್ಯುತ್ ಕಂಬ ಬೀಳುವಂತಾಗಿದೆ.



### ಮನೆ ಕುಸಿತ

ತಾಲ್ಲೂಕಿನ ಹಾನುಬಾಳ್ ಹೋಬಳಿಯ ಮದನಾಪುರ ಗ್ರಾಮದ ಪಾರ್ವತಿ ಎಂಬುವರ ಮನೆ ಮಳೆಯಿಂದಾಗಿ ಸಂಪೂರ್ಣ ಕುಸಿದಿದೆ. ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಗದ್ದೆಗಳ ಮೇಲೆ ನೀರು ನಿಂತಿದೆ. ಹೆತ್ತೂರು ಹೋಬಳಿ ಮೆಕ್ಕಿರಮನೆ ಸಮೀಪ ಹಳ್ಳ ಉಕ್ಕಿ ಹರಿದು ಗದ್ದೆಗಳು ಜಲಾವೃತಗೊಂಡಿದೆ. ಭಾರೀ ಮಳೆ ಸುರಿಯುತ್ತಿರುವುದರಿಂದ ಮಧ್ಯಾಹ್ನ 3 ಗಂಟೆಗೆ ಕತ್ತಲು ವಾತಾವರಣ ನಿರ್ಮಾಣವಾಗಿತ್ತು.

### ವಿಪತ್ತು ನಿರ್ವಹಣೆಗೆ ಸಹಾಯವಾಣಿ ಕೇಂದ್ರ

ವಿಪತ್ತು ನಿರ್ವಹಣೆಗೆ ಜಿಲ್ಲಾಡಳಿತದಿಂದ 24★7 ಸಹಾಯವಾಣಿ ತೆರೆಯಲಾಗಿದೆ. ಅತಿವೃಷ್ಟಿಯಿಂದ ಸಮಸ್ಯೆ ಉಂಟಾದರೆ ಅಥವಾ ಸಮಸ್ಯೆ ಉಂಟಾಗುವ ಸಾಧ್ಯತೆ ಇದ್ದರೆ ಸಂಪರ್ಕಿಸಬಹುದಾಗಿದೆ. ಇದಲ್ಲದೆ 6 ಕಾಳಜಿ ಕೇಂದ್ರ ಗುರುತಿಸಲಾಗಿದ್ದು ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರನ್ನು ಕೇಂದ್ರ ಸ್ಥಾನದಲ್ಲಿ ಇರಲು ಆದೇಶಿಸಲಾಗಿದೆ.

### ವಿದ್ಯುತ್ ವ್ಯತ್ಯಯ

ಹಲವಾರು ಗ್ರಾಮಗಳಲ್ಲಿ ಮರದ ರೆಂಬೆ ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ತಾಲ್ಲೂಕಿನ ದೇವಾಲದಕೆರೆ ಸಮೀಪದ ಹೊಡಚಹಳ್ಳಿ ಗ್ರಾಮದಲ್ಲಿ ಭಾರೀ ಮಳೆಯಿಂದ ಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದ ಪರಿಣಾಮ ಮೂರು ಕಂಬಗಳು ನೆಲಕ್ಕುರುಳಿದ್ದು ಸ್ಥಳಕ್ಕೆ ಆಗಮಿಸಿದ ಸೆಸ್ಕ್ ಸಿಬ್ಬಂದಿ ಗ್ರಾಮಸ್ಥರ ನೆರವಿನಿಂದ ಕಂಬಗಳನ್ನು ಮೇಲೆತ್ತಿ ವಿದ್ಯುತ್ ನೀಡಿದರು.

ಸಕಲೇಶಪುರ-ದೇವಾಲದಕೆರೆ ಮಾರ್ಗದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ವಿದ್ಯುತ್ ಕಂಬ ಬಿದ್ದಿರುವುದನ್ನು ನೋಡಿ ವಾಪಸ್ ಬರುತ್ತಿದ್ದಾಗ ಚರಂಡಿಯೊಳಗೆ ಸಿಲುಕಿದ ಪರಿಣಾಮ ಧರ್ಮಸ್ಥಳ ಶೌರ್ಯ ವಿಪತ್ತು ನಿರ್ವಹಣೆ ತಂಡದ ಸ್ವಯಂ ಸೇವಕರಾದ ಪ್ರಸನ್ನ ಕುಮಾರ್, ನಿಖಿಲ್, ಅಕ್ಷಯ್, ಗಿರೀಶ್ ಸುನಿಲ್ ಮತ್ತು ಗ್ರಾಮಸ್ಥರಾದ ಅಶೋಕ್ ಗೌಡ, ನವೀನ್ ಕಿತ್ತಳೆಮನೆ, ರಮೇಶ್ ಆಚಾರ್ಯ, ನಿಶಾಂತ್, ಮಂಜು ಮತ್ತಿತರರು ವಿದ್ಯುತ್ ಕಂಬ ಎತ್ತಲು ಹಾಗೂ ಬಸ್ ಮೇಲೆತ್ತಲು ನೆರವಾದರು.

### ಭೂ ಕುಸಿತ ತಡೆಗೆ ಕ್ರಮ

ಸಕಲೇಶಪುರ ವ್ಯಾಪ್ತಿಯ ರಸ್ತೆ ಬದಿಯಲ್ಲಿ ಭೂಕುಸಿತ ಉಂಟಾಗಬಹುದಾದ 12 ಸ್ಥಳಗಳನ್ನು ಗುರುತಿಸಲಾಗಿದ್ದು, ವೈಜ್ಞಾನಿಕವಾಗಿ ಭೂ ಕುಸಿತ ತಡೆಯಲು ಈಗಾಗಲೇ ವರದಿ ಸಿದ್ದಪಡಿಸಲಾಗಿದೆ. ಮಳೆಗಾಲ ಮುಗಿದ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆಗೋಡೆ ಕುಸಿತವಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಈಗಾಗಲೇ ಮಳೆಗಾಲ ಎದುರಿಸಲು ಸಭೆ ನಡೆಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಕಂದಾಯ ಹಾಗೂ ಮತ್ತಿತರರ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆಯು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಅಂಗನವಾಡಿ ಹಾಗೂ ಶಾಲೆಗಳಿಗೆ ರಜೆ ನೀಡಲಾಗಿದೆ. ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಅತ್ಯಂತ ಕ್ರಿಯಾಶೀಲವಾಗಿರುವಂತೆ ಹಾಗೂ ಎಂತಹ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಉಪವಿಭಾಗಾಧಿಕಾರಿ ಶೃತಿ ಹಾಗೂ ತಹಶೀಲ್ದಾರ್ ಅರವಿಂದ್, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಹಾಜರಿದ್ದರು



### ಐದು ತಾಲ್ಲೂಕಿನ ಶಾಲೆಗಳಿಗೆ ಇಂದು ರಜೆ

ಹಾಸನ: ಜಿಲ್ಲೆಯಾದ್ಯಂತ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಜೂ. 26ರ ಗುರುವಾರ ಆಲೂರು, ಅರಕಲಗೂಡು, ಹಾಸನ, ಹೊಳೆನರಸೀಪುರ ತಾಲ್ಲೂಕಿನ ಎಲ್ಲ ಅಂಗನವಾಡಿ ಹಾಗು ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಸಕಲೇಶಪುರ ತಾಲ್ಲೂಕಿನ ಶಾಲೆ ಹಾಗೂ ಕಾಲೇಜುಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಆದೇಶಿಸಿದ್ದಾರೆ.

# ಜಿಲ್ಲೆಯ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನದ ವಾಗ್ದಾನ

## ಮಹಿಳೆಯರಿಗೆ ಎಲ್ಲ ಕ್ಷೇತ್ರದಲ್ಲೂ ಅವಕಾಶ ಸಿಗಲಿ | ಮಾಧ್ಯಮ ಸಂವಾದದಲ್ಲಿ ನೂತನ ಡಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ಜಿಲ್ಲೆಯು ಸಾಂಸ್ಕೃತಿಕ ಹಾಗೂ ಐತಿಹಾಸಿಕವಾಗಿ ಸಾಕಷ್ಟು ಮಹತ್ವ ಹೊಂದಿದೆ. ಜಿಲ್ಲೆಯ ಜನತೆಗೆ ಒಳಿತಾಗುವ ನಿಟ್ಟಿನಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತೇನೆ ಎಂದು ನೂತನ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಾಗತ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯಾವುದೇ ಕ್ಷೇತ್ರದ ಕೆಲಸದಲ್ಲಾದರೂ ಮೇಲಧಿಕಾರಿ ಕಟ್ಟುನಿಟ್ಟಾಗಿದ್ದರೆ ಅಧೀನ ಅಧಿಕಾರಿಗಳು ಅದೇ ರೀತಿ ಕಾರ್ಯನಿರ್ವಹಿಸುತ್ತಾರೆ ಎಂಬ ನಂಬಿಕೆ ನನಗಿದೆ. ವರ್ಗಾವಣೆಯಾದ ಬಳಿಕಯೂ ಇಂತಹ ಅವಧಿಯಲ್ಲಿ ಈ ಅಧಿಕಾರಿ ಮಹತ್ವದ ಕೆಲಸ ಮಾಡಿದ್ದರು ಎಂದು ಜನರು ಸ್ಮರಿಸಬೇಕು ಎನ್ನುವುದೇ ನನ್ನ ಆಸೆ ಎಂದು ಹೇಳಿದರು.

ಸರ್ಕಾರ-ಜನರ ಸೇತುವೆಯಾಗಿ, ಸರ್ಕಾರಿ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುವೆ. ಜಿಲ್ಲೆಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಕಂದಾಯ ಇಲಾಖೆ ಕಾರ್ಯದಲ್ಲಿ ರಾಜ್ಯದಲ್ಲೇ ಹಾಸನ ಮುಂಚೂಣಿಯಲ್ಲಿದೆ. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 6ನೇ ಸ್ಥಾನದಲ್ಲಿದ್ದು ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ಪ್ರಯತ್ನಿಸುವೆ ಎಂದರು. ಹಾಸನಾಂಬ ಕಲಾಕ್ಷೇತ್ರದಲ್ಲಿ ತಾಲೀಮು ನಡೆಸಲು ಜಾಗವಿಲ್ಲ ಎಂಬ ವಿಚಾರ ಗಮನಕ್ಕೆ ಬಂದಿದೆ. ಪಕ್ಕದಲ್ಲಿರುವ ಜಾಗ ಬಳಸಿ ತಾಲೀಮಿಗೆ ಕೊಠಡಿ ನಿರ್ಮಾಣ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ಪ್ರಗತಿಯಲ್ಲಿರುವ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಪೂರಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಕಲೇಶಪುರ ಭಾಗದಲ್ಲಿ ಹೆದ್ದಾರಿ ಅಗಲೀಕರಣ ವಿಳಂಬ, ಭೂಕುಸಿತ, ಆನೆ-ಮಾನವ ಸಂಘರ್ಷ ಹೆಚ್ಚಾಗಿರುವುದನ್ನು ಪರಿಗಣಿಸಲಾಗಿದೆ. ಅದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿದ್ದೇನೆ. ಕೇವಲ ನಾನೊಬ್ಬಳೇ ಎಲ್ಲವನ್ನೂ ಮಾಡಿ ಮುಗಿಸುತ್ತೇನೆ ಎಂಬುದು ಸರಿಯಲ್ಲ. ಅಧೀನ ಅಧಿಕಾರಿಗಳು, ಸಾರ್ವಜನಿಕರು, ಸಂಘ ಸಂಸ್ಥೆಗಳು, ಪತ್ರಕರ್ತರು ಹಾಗು ಎಲ್ಲಾ ಜನಪ್ರತಿನಿಧಿಗಳ ಸಹಕಾರ ಅತ್ಯಗತ್ಯ ಎಂದರು.



### ಹಾಸನಾಂಬ ಜಾತ್ರೆಗೆ ಪೂರ್ವ ಸಿದ್ಧತೆ

ಐದಾರು ವರ್ಷಗಳ ಹಿಂದೆ ಜಿಲ್ಲೆಯ ಜನರಷ್ಟೇ ಭಾಗವಹಿಸುತ್ತಿದ್ದ ಹಾಸನಾಂಬ ಜಾತ್ರೆಗೆ ಇತ್ತೀಚೆಗೆ ಹೊರ ದೇಶಗಳಿಂದಲೂ ಭಕ್ತರು ಬರುತ್ತಿದ್ದಾರೆ. ಇರುವ ಅಲ್ಪ ಜಾಗದಲ್ಲೇ ದೇವರ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಮಾಹಿತಿ ಪಡೆದಿದ್ದೇನೆ. ಹಿಂದೆ ಆಗಿರುವ ಸಣ್ಣಪುಟ್ಟ ಲೋಪಗಳ ಬಗ್ಗೆ ಎಚ್ಚರ ವಹಿಸಲಾಗುವುದು. ಸುಲಭ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಹೆಚ್. ವೇಣುಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಮುಸುಕಿನ ಜೋಳ ಬೆಳೆಗೆ ಬಿಳಿ ಸುಳಿ ರೋಗ ಬಾಧಿಸಿದ್ದು ತುರ್ತಾಗಿ ರೈತರಿಗೆ ನೆರವಾಗಬೇಕು. ಉತ್ತಮ ಕೆಲಸಗಳ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿ ಎಂದು ಶುಭ ಹಾರೈಸಿದರು.

ಕೆಯೂಡಬ್ಲ್ಯೂಜೆ ವಿಶೇಷ ಪ್ರತಿನಿಧಿ ರವಿ ನಾಕಲಗೂಡು ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ಪತ್ರಕರ್ತರ ಆರ್.ಪಿ.ವೆಂಕಟೇಶ ಮೂರ್ತಿ, ಮಾಜಿ ಅಧ್ಯಕ್ಷೆ ಲೀಲಾವತಿ, ಪ್ರಧಾನ ಕಾರ್ಯದರ್ಶಿ ಬಿ.ಸಿ. ಶಶಿಧರ್ ಹಾಗೂ ಇತರರಿದ್ದರು.

### ಐಎಎಸ್ ಕನಸಿಗೆ ನೀರೆರೆದ ಪತಿ

ಪದವಿ ಮುಗಿಯುತ್ತಿದ್ದಂತೆ ಮದುವೆಪದವಿ ಮುಗಿಯುತ್ತಿದ್ದಂತೆ ಮನೆಯಲ್ಲಿ ಮದುವೆ ಮಾಡಿದರು. ಇನ್ನೂ ಓದಬೇಕೆಂದು ಹಠ ಹಿಡಿದು ಒಂದು ವಾರ ಊಟ ಬಿಟ್ಟು ಕುಳಿತೆನಾದರೂ ಮದುವೆ ಪ್ರಸ್ತಾಪ ತಿರಸ್ಕಾರಕ್ಕೆ ಮನೆಯವರು ಒಪ್ಪಿಗೆ ನೀಡಲಿಲ್ಲ. ಆದರೆ ನನ್ನ ಗಂಡನ ಪ್ರೋತ್ಸಾ ಹದಿಂದ ಐಎಎಸ್ ಅಧಿಕಾರಿ ಆಗಿದ್ದೇನೆಂದು ನೂತನ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಬಳ್ಳಾರಿ ಮೂಲದ ಲತಾಕುಮಾರಿ ಅವರು ಕೃಷಿ ಪ್ರಧಾನ ಕುಟುಂಬ ಹಿನ್ನೆಲೆಯಿಂದ ಬಂದವರು. ಡಿಗ್ರಿ ಮುಗಿಯುತ್ತಿದ್ದಂತೆ ನಾನು ಇನ್ನು ಓದಬೇಕೆಂದು ಹೇಳಿದಾಗ ಹೆಚ್ಚು ಓದಿದರೆ ಅದಕ್ಕೆ ತಕ್ಕುನಾದ ಗಂಡು ಹುಡುಕಬೇಕಾಗುತ್ತದೆ. ಓದಿದ್ದು ಇಷ್ಟೇ ಸಾಕೆಂದು ಬ್ಯಾಂಕ್ ಉದ್ಯೋಗಿ ವರನನ್ನು ಹುಡುಕಿ ಮದುವೆ ಮಾಡಿದರು. ಆದರೆ ನನ್ನ ಓದಿನ ಆಸೆಗೆ ಗಂಡ ಪ್ರೋತ್ಸಾಹ ನೀಡಿದರು. ಗಂಡನ ಮನೆಗೆ ಬಂದಾಕ್ಷಣ ಅವರ ದೊಡ್ಡ ಮನೆಯ ಎಲ್ಲಾ ಕೋಣೆಗಳ ಬಾಗಿಲು ತೆರೆದಿದ್ದವು. ಆದರೆ ಒಂದು ಕೊಠಡಿಗೆ ಬೀಗ ಹಾಕಿತ್ತು. ಅದು ಏನೆಂದು ಕೇಳಿದಾಗ ಪುಸ್ತಕಗಳ ಖಜಾನೆಯೇ ಅಲ್ಲಿತ್ತು. ಅದರ ತುಂಬಾ ಕೇವಲ ಪುಸ್ತಕಗಳೇ ತುಂಬಿದ್ದವು. ನನ್ನ ಗಂಡ ಸಹ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿ ಪಾಸಾಗದೆ ಬ್ಯಾಂಕ್ ಉದ್ಯೋಗಿಯಾಗಿ ಮುಂದುವರಿದಿದ್ದರು. ನಮ ಅತ್ತೆ ಆ ಪುಸ್ತಕಗಳನ್ನೆಲ್ಲ ಮಂಡಕ್ಕಿ ಕಟ್ಟಲು ಎಲ್ಲರಿಗೂ ಕೊಡುತ್ತಿದ್ದರು. ಆದರೆ ನಾನು ಅವುಗಳನ್ನು ತೆಗೆದುಕೊಂಡು ಓದಲು ಶುರು ಮಾಡಿದೆ. ಪ್ರಥಮ ಪರೀಕ್ಷೆಯಲ್ಲಿ ಪ್ರಿಲಿಮಿನರಿ ಪಾಸಾದೆ ಎಂದು ಹೇಳಿದರು.

### ಹೆಣ್ಣು ಮಕ್ಕಳಿಗೆ ಚಮಚ ಬದಲು ಪೆನ್ ಕೊಡಿ

ಸಮಾಜದಲ್ಲಿ ಹೆಣ್ಣು ಮಕ್ಕಳು ಕೇವಲ ಅಡುಗೆ ಮತ್ತು ಸಂಸಾರ ನಿಭಾಯಿಸಲು ಮಾತ್ರ ಎಂಬ ಮನೋಭಾವನೆ ಈಗಲೂ ಇದೆ. ಎಲ್ಲಾ ರಂಗದಲ್ಲೂ ಮಹಿಳೆಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಇನ್ನಷ್ಟು ಅವಕಾಶ ಸಿಗಬೇಕು. ಮಗಳಿಗೆ ಚಮಚ ನೀಡದೆ ಗ್ರೀನ್ ಪೆನ್ ನೀಡಿ ಅದೇ ಪ್ರೇರಣೆ ಆಗಿ ಗೆಜೆಟೆಡ್ ಆಫೀಸರ್ ಆಗಬಹುದು. ನಾನು ಹಾಸನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸುವಾಗ ನನ್ನ ತಂದೆ ಸಹಿ ಮಾಡಲು ಗ್ರೀನ್ ಇಂಕ್ ಪೆನ್ ನೀಡಿ ಹರಿಸಿದರು ಎಂದು ಸ್ಮರಿಸಿದರು.

ಹಾಸನ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವುದು ಸಂತೋಷದ ವಿಚಾರ. ಮಹಾನಗರವಾಗಿ ಬೆಳೆಯಬೇಕಾದರೆ ಸಾಕಷ್ಟು ಕೆಲಸ ಆಗಬೇಕಿದೆ.

ಪಾದಚಾರಿಗಳು ನಡೆದಾಡಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಪಾದಚಾರಿ ಆಂದೋಲನ ಆಗಬೇಕು, ಟ್ರಾಫಿಕ್ ಹಾಗು ಪಾರ್ಕಿಂಗ್ ಸಮಸ್ಯೆ ನಿವಾರಣೆ ಆಗಬೇಕು. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

# ವಿದ್ಯಾರ್ಥಿಗಳು ಮಾನಸಿಕ ಸ್ಥಿಮಿತ ಕಳೆದುಕೊಳ್ಳಬೇಡಿ



ಹಾಸನ: ಹದಿಹರೆಯದ ವಯಸ್ಸಿನಲ್ಲಿ ಮನಸ್ಸು ಚಂಚಲತೆಯಿಂದ ಅಡ್ಡದಾರಿ ಹಿಡಿಯುವ ಸಾಧ್ಯತೆಯಿದ್ದು ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕು ಎಂದು ಅಭಿವೃದ್ಧಿ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್‌ನ ಕಾರ್ಯಕ್ರಮ ನಿರ್ದೇಶಕ ಹೆಚ್.ಎಂ. ಪ್ರವೀಣ್ ಸಲಹೆ ನೀಡಿದರು.

ನಗರದ ಗುಡ್ ಸಿಟಿಜನ್ ಪಿಯು ಮತ್ತು ಪ್ರಥಮ ದರ್ಜೆ ಕಾಲೇಜಿನಲ್ಲಿ ಅಭಿವೃದ್ಧಿ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಆರೋಗ್ಯ ಮತ್ತು ಏಡ್ಸ್ ಬಗ್ಗೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಹದಿಹರೆಯದ ವಯಸ್ಸಿನಲ್ಲಿ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಬೇಕು. ಅದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಇಲ್ಲದಿದ್ದರೆ ಹಲವು ರೀತಿಯ ಕಾಯಿಲೆ ಹಾಗೂ ತೊಂದರೆಗೆ ಸಿಲುಕಬೇಕಾಗುತ್ತದೆ ಎಂದರು.

ಓದುವ ವಯಸ್ಸಿನಲ್ಲಿ ಪ್ರೀತಿ ಪ್ರೇಮವೆಂದು ಸಮಯ ಹಾಳು ಮಾಡುವುದು. ದುಶ್ಚಟಗಳಿಗೆ ದಾಸರಾಗುವುದು ಸರಿಯಲ್ಲ. ಉತ್ತಮ ವ್ಯಾಸಂಗದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು. ಸಾಧಕ ಬಾಧಕಗಳ ಅರಿವು ಇರಬೇಕೆಂದರು.

ಪ್ರಾಂಶುಪಾಲ ಡಿ.ಎಂ. ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕಾಂತರಾಜು, ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಪ್ರಭುದೇವ್, ಕಾರ್ಯದರ್ಶಿ ಉಮೇಶ್, ಉಪನ್ಯಾಸಕ ಶ್ರೀನಿವಾಸ್ ಭಾಗವಹಿಸಿದ್ದರು.

## ಮಹಿಳೆಯರ ಮೇಲೆ ಮಾರಣಾಂತಿಕ ಹಲ್ಲೆ

ಬೇಲೂರು: ಜಮೀನು ವಿಚಾರವಾಗಿ ದ್ವೇಷದಿಂದ ಮಹಿಳೆ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿರುವ ಘಟನೆ ಹೊನ್ನೇನಹಳ್ಳಿ ಕಾವಲು ಗ್ರಾಮದಲ್ಲಿ ನಡೆದಿದೆ.

ಹಳೇಬೀಡು ಹೋಬಳಿ ಮತಿಘಟ್ಟ ಗ್ರಾಮದ ಸರೋಜಮ್ಮ ಹಾಗೂ ಮಾನಸ ಗಾಯಾಳುಗಳು.

ತಾಯಿ ಹಾಗೂ ಮಗಳು ಜಮೀನು ಹತ್ತಿರ ಹೋಗಿದ್ದಾಗ ಅಲ್ಲಿಗೆ ಬಂದ ರಮೇಶ ಮತ್ತು ಇತರ ಐವರು ತಡೆದು ಇಲ್ಲಿಗೇಕೆ ಬಂದಿದ್ದೀರಿ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಕೈಯಲ್ಲಿದ್ದ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದಾರೆ. ಕೆಳಕ್ಕೆ ಬೀಳಿಸಿದ್ದು ಹೊಡೆದಿದ್ದಾರೆ. ಜಗಳ ಬಿಡಿಸಲು ಬಂದ ಸರೋಜಮ್ಮ ಅವರ ಮೇಲೂ ಹಲ್ಲೆ ನಡೆಸಿದ್ದಾರೆ. ಗಾಯಾಳುಗಳನ್ನು ಹಾಸನದ ಹಿಮ್ಸ್‌ಗೆ ದಾಖಲಿಸಲಾಗಿದೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಾಟೆಹೊಳೆ ಜಲಾಶಯದಿಂದ ನದಿಗೆ ನೀರು

ಆಲೂರು: ಮೂರು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದ ತಾಲ್ಲೂಕಿನ ವಾಟೆಹೊಳೆ ಜಲಾಶಯ ತುಂಬಿದ್ದು ಹೆಚ್ಚುವರಿ ನೀರನ್ನು ಹೊರಬಿಡಲಾಗುತ್ತಿದೆ. 1.51 ಟಿಎಂಸಿ ಸಾಮರ್ಥ್ಯವುಳ್ಳ ಜಲಾಶಯದಲ್ಲಿ ಬುಧವಾರ 1.431 ಟಿಎಂಸಿ ನೀರು ಸಂಗ್ರಹವಾಗಿತ್ತು. 185 ಕ್ಯೂಸೆಕ್ ಒಳ ಹರಿವು ಇರುವುದರಿಂದ ಜಲಾಶಯದ ಒಂದು ಗೇಟ್‌ನಿಂದ ಹೆಚ್ಚುವರಿ ನೀರನ್ನು ನದಿ ಪಾತ್ರಕ್ಕೆ ಬಿಡಲಾಗುತ್ತಿದೆ. 1986ರಲ್ಲಿ ಅಣೆಕಟ್ಟು ಕಟ್ಟಲಾಗಿದೆ. ಈ ವರೆಗೆ 13 ಬಾರಿ ಜಲಾಶಯ ಭರ್ತಿಯಾಗಿದೆ. 2019 ರಿಂದ ಸಾಮಾನ್ಯವಾಗಿ ಪ್ರತಿವರ್ಷ ಜಲಾಶಯ ಭರ್ತಿಯಾಗುತ್ತಿದೆ ಎಂದು ಸಹಾಯಕ ಎಂಜಿನಿಯರ್ ಸಂದೀಪ್ ತಿಳಿಸಿದ್ದಾರೆ.




ಹಾಸನ: ಮಳೆಗಾಲದಲ್ಲಿ ಪತ್ರಿಕಾ ವಿತರಕರಿಗೆ ಅನುಕೂಲವಾಗಲೆಂದು ಹಾಸನ ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯಿಂದ ರೈನ್ ಕೋಟ್ ವಿತರಿಸಲಾಯಿತು. ಬ್ಯಾಂಕ್‌ನ ಸಹಾಯಕ ಮಹಾ ಪ್ರಬಂಧಕ ವೈ. ಅಂಟೋನಿರಾಜ್, ವಿಭಾಗೀಯ ಪ್ರಬಂಧಕಿ ಎ.ಪಿ. ನೀರಜಾ ಕೋಟ್‌ಗಳನ್ನು ವಿತರಿಸಿದರು. ಪತ್ರಿಕಾ ವಿತರಕರಾದ ಗಿರೀಶ್, ಸಂತೋಷ್, ಸುನಿಲ್ ಉಪಸ್ಥಿತರದ್ದರು. ಹಾಸನಾಂಬ ಜಿಲ್ಲಾ ಪತ್ರಿಕಾ ವಿತರಕರ ಸಂಘದ ವತಿಯಿಂದ ಬ್ಯಾಂಕ್ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಲಾಯಿತು.

# ಜಿಲ್ಲೆಯ 614 ಶಾಲೆಗೆ ಬೀಗ ಹಾಕುವ ಭೀತಿ

## ದಾಖಲಾತಿ ಕಡಿಮೆ ಕಾರಣ | ವಿದ್ಯಾರ್ಥಿ, ಪೋಷಕರ ಆತಂಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದಾಖಲಾತಿ ಕೊರತೆಯಿರುವ ಅಂದರೆ 10ಕ್ಕಿಂತ ಕಡಿಮೆ ಮಕ್ಕಳಿರುವ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಲು ಸರ್ಕಾರ ಮುಂದಾಗಿರುವುದರಿಂದ ಜಿಲ್ಲೆಯ 614 ಶಾಲೆಗಳು ಶಾಶ್ವತವಾಗಿ ಬಾಗಿಲು ಹಾಕುತ್ತವೆ ಎಂಬ ಆತಂಕ ವಿದ್ಯಾರ್ಥಿ ಹಾಗೂ ಪೋಷಕರನ್ನು ಕಾಡುತ್ತಿದೆ.

ಮೂಲಸೌಕರ್ಯ ಕೊರತೆ, ಹಳೆಯ ಕಟ್ಟಡ, ಶಿಕ್ಷಕರ ಅಭಾವ ಹಾಗೂ ಖಾಸಗಿ ಶಾಲೆಗಳ ಹಾವಳಿಯಿಂದ ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶಾತಿ ಕಡಿಮೆಯಾಗುತ್ತಲೇ ಇದೆ. ಇದರಿಂದ ಆರ್ಥಿಕ ಹೊರೆ ಹೆಚ್ಚಾಗುತ್ತಿದ್ದು ನಿರ್ವಹಣೆಗಾಗಿ ಅಕ್ಕಪಕ್ಕದ ಶಾಲೆಗಳಿಗೆ ಶಾಲೆಗಳ ವಿಲೀನ ಮಾಡುವ ಚಿಂತನೆಯನ್ನು ಶಿಕ್ಷಣ ಇಲಾಖೆ ಕಳೆದ ವರ್ಷ ಪ್ರಕಟಿಸಿದೆ. ಆ ಹಿನ್ನೆಲೆಯಲ್ಲಿ ಜಿಲ್ಲೆಯ 614 ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದು ಈ ಶಾಲೆಗೆ ಯಾವಾಗ ಬೀಗ ಹಾಕುತ್ತಾರೋ ಎಂಬ ಆತಂಕ ಸೃಷ್ಟಿಯಾಗಿದೆ.

ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಗೆ ಒಳಪಟ್ಟ 2218, ಸಮಾಜ ಕಲ್ಯಾಣ ಇಲಾಖೆಯ 4, ಅನುದಾನ ಸಹಿತ 46, ಅನುದಾನ ರಹಿತ 163 ಪ್ರಾಥಮಿಕ ಶಾಲೆ, ಶಿಕ್ಷಣ ಇಲಾಖೆಯ 48, ಅನುದಾನ ಸಹಿತ 126, ಅನುದಾನ ರಹಿತ 165 ಪ್ರೌಢ ಶಾಲೆ ಸೇರಿ ಒಟ್ಟು 3013 ಶಾಲೆಗಳಿವೆ.



### ಶಾಲೆಗಳಲ್ಲಿ ಸಮಸ್ಯೆಗಳದ್ದೇ ಕಾರುಬಾರು

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಲು ಸೌಕರ್ಯ ಕಲ್ಪಿಸದೆ ಇರುವುದು ಪ್ರಮುಖ ಕಾರಣ ಎಂದು ಎಐಡಿಎಸ್ಒ ಸಮೀಕ್ಷೆಯಲ್ಲಿ ತಿಳಿದುಬಂದಿರುವ ವಿಚಾರ. ಈಗ 10ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳಲ್ಲಿ ಕಳೆದ ಹಲವು ವರ್ಷಗಳ ಹಿಂದೆ 50 ಮಕ್ಕಳಿರುತ್ತಿದ್ದರು. ವರ್ಷದಿಂದ ವರ್ಷಕ್ಕೆ ದಾಖಲಾತಿ ಕುಸಿಯಲು ಸರ್ಕಾರದ ನಿರ್ಲಕ್ಷ್ಯ ಕಾರಣ ಹೊರತು ಬೇರೆ ಏನೂ ಅಲ್ಲ. ಶಿಕ್ಷಕರ ಕೊರತೆ, ಸುಸಜ್ಜಿತ ಆಟದ ಮೈದಾನ ಇಲ್ಲದಿರುವುದು, ಕಟ್ಟಡ ಶಿಥಿಲಾವಸ್ಥೆ ತಲುಪಿರುವುದು, ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತಾರೆ. ಈಗ ವಿಲೀನದ ಹೆಸರಿನಲ್ಲಿ ಶಾಲೆ ಮುಚ್ಚುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಹಾಸನದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಸಮೀಪದಲ್ಲಿರುವ ಸರ್ಕಾರಿ ಉರ್ದು ಶಾಲೆಯಲ್ಲಿ 90 ಮಕ್ಕಳಿದ್ದಾರೆ. ಆದರೆ ಅಡುಗೆ ಮಾಡಲು ಪ್ರತ್ಯೇಕ ಕೊಠಡಿಯಿಲ್ಲ. ಪಾಠ ಮಾಡುವ ಕೋಣೆಯಲ್ಲೇ ಅಡುಗೆ ಮಾಡಲಾಗುತ್ತಿದೆ. ಹೀಗಾದರೆ ಮಕ್ಕಳು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಾರೆ. ಸರ್ಕಾರ ಸಮಸ್ಯೆಗೆ ಪರಿಹಾರ ಕಲ್ಪಿಸುವ ಬದಲು ವಿಲೀನ ಹೆಸರಿನಲ್ಲಿ ಶಾಲೆಗಳಿಗೆ ಬೀಗ ಹಾಕಿ ಬಡವರಿಗೆ ತೊಂದರೆ ಮಾಡುತ್ತಿದೆ.

**– ಚೈತ್ರ, ಎಐಡಿಎಸ್ಒ ಜಿಲ್ಲಾ ಸಂಚಾಲಕಿ**

### ಅನುದಾನಿತ ಶಾಲೆಗಳಿಗೂ ತೊಂದರೆ

ಈ ನಿಯಮ ಸರ್ಕಾರಿ ಶಾಲೆಗಳಿಗಿಂತ ಅನುದಾನಿತ ಶಾಲೆಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ. ಇಂತಹ ಶಾಲೆಗಳು ಸರ್ಕಾರದ ಮೇಲೆ ಹೊರೆಯಾಗಿ ಪರಿಣಮಿಸಿವೆ. ಅಲ್ಲಿ ಮಾನವ ಸಂಪನ್ಮೂಲ ಸಹ ಪೋಲಾಗುತ್ತಿದೆ. ಹೀಗಾಗಿ ಸರ್ಕಾರ ಅಂತಹ ಶಾಲೆಗಳ ಪಟ್ಟಿ ಸಿದ್ಧಪಡಿಸಿದ್ದು, ಅವುಗಳಿಗೆ ಕೊನೆಯ ಮೊಳೆ ಹೊಡೆಯಲು ಸಿದ್ಧತೆ ನಡೆಸುತ್ತಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಶಿಕ್ಷಣ ಇಲಾಖೆ ಕೆಲವು ತಿಂಗಳ ಹಿಂದೆಯೇ ನೋಟೀಸ್ ಜಾರಿ ಮಾಡಿತ್ತು.

ಆದರೂ ಹಾಜರಾತಿಯಲ್ಲಿ ಸುಧಾರಣೆ ಕಾಣದ ಹಿನ್ನಲೆಯಲ್ಲಿ ಮಾನ್ಯತೆ ರದ್ದುಮಾಡುವ ಪ್ರಕ್ರಿಯೆ ಆರಂಭವಾಗಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಿಖರ ಅಂಕಿಅಂಶ ಗೊತ್ತಾಗಲಿದೆ.

### ಸಹಿ ಸಂಗ್ರಹ ಅಭಿಯಾನ

ಇನ್ನು ವಿಲೀನದ ಹೆಸರಿನಲ್ಲಿ ಸರ್ಕಾರಿ ಶಾಲೆಗಳಿಗೆ ಶಾಶ್ವತವಾಗಿ ಬೀಗ ಹಾಕಲು ಹೊರಟಿರುವ ನಿರ್ಧಾರ ಖಂಡಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಸಂಘಟನೆ ರಾಜ್ಯಾದ್ಯಂತ ಪ್ರವಾಸ ನಡೆಸಿ ಸರ್ಕಾರಿ ಶಾಲೆಗಳ ಮಹತ್ವ ಸಾರುವ ಕೆಲಸ ಮಾಡುತ್ತಿದೆ. ಕಳೆದ ಜನವರಿಯಿಂದ ಸಂಘಟನೆಯ ಸದಸ್ಯರು ಪ್ರತಿ ಗ್ರಾಮಕ್ಕೆ ಭೇಟಿ ನೀಡಿ ವಿಲೀನಕ್ಕೆ ನಿರ್ಧರಿಸಿರುವ ಶಾಲೆಗಳ ಸ್ಥಿತಿಗತಿಯನ್ನು ತೆರೆದಿರುವ ಪ್ರಯತ್ನ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ 15 ಲಕ್ಷ ಸಹಿ ಸಂಗ್ರಹ ಅಭಿಯಾನ ಸಹ ನಡೆಸಲಾಗಿದೆ. ಗ್ರಾಮಗಳಲ್ಲಿ ವಿದ್ಯಾವಂತ ಯುವಕರು ಹಾಗೂ ವಯಸ್ಕರ ಸಮಿತಿ ರಚಿಸಿ ಸರ್ಕಾರಿ ಶಾಲೆ ಉಳಿವಿಗಾಗಿ ವಿಭಿನ್ನ ಹೋರಾಟಕ್ಕೆ ವೇದಿಕೆ ಸೃಷ್ಟಿಸುತ್ತಿದ್ದಾರೆ.

# ರಮೇಶ್ ಬಂಡಿಸಿದ್ದೇಗೌಡ ವಿರುದ್ಧ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಮುಸ್ಲಿಂ ವಿರೋಧಿ ಹೇಳಿಕೆ ನೀಡಿರುವ ಶ್ರೀರಂಗಪಟ್ಟಣ ಕಾಂಗ್ರೆಸ್ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ಹೇಮಾವತಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.

ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಮಾತನಾಡಿ, ಮುಸ್ಲಿಮರಿಗೆ ಸಾಗುವಳಿ ಭೂಮಿ ಮಾಡಿಕೊಟ್ಟರೆ ನೇಣು ಹಾಕುತ್ತೇವೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿರುವ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರ ಹೇಳಿಕೆ ಖಂಡನೀಯ. ಇವರನ್ನು ಕೂಡಲೇ ಪಕ್ಷದಿಂದ ಉಚ್ಛಾಟಿಸಿ, ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು. ಬಹಿರಂಗವಾಗಿ ಮುಸಲ್ಮಾನ್ ಸಮಾಜದವರನ್ನು ಹೀಯಾಳಿಸಿ ಹೇಳಿಕೆ ನೀಡಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಅಲ್ಲದೇ ಸಂವಿಧಾನ ವಿರೋಧಿ ಹಾಗು ಅಲ್ಪಸಂಖ್ಯಾತರ ವಿರೋಧಿ ಎಂದು ದೂರಿದರು.

ಇದು ಕೇವಲ ಹೇಳಿಕೆಯಲ್ಲ, ಇದು ಭಾರತದ ಸಂವಿಧಾನತ್ಮಕ ಮೌಲ್ಯಗಳ ಮೇಲಿನ ದಮನಕಾರಿ ನಡೆಯಾಗಿದೆ. ಆದಷ್ಟು ಬೇಗ ರಮೇಶ್ ಖಂಡಿಸಿದ್ದೇಗೌಡ ಅವರ ವಿರುದ್ಧ ಕಾನೂನು ಕ್ರಮ ಜರುಗಿಸದೇ ಇದ್ದರೆ ರಾಜ್ಯವ್ಯಾಪಿ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಎಸ್‌ಡಿಪಿಐ ಹಾಸನ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಶಜೀಲ್ ಅಹ್ಮದ್, ಕಾರ್ಯದರ್ಶಿ ಇರ್ಫಾನ್ ಪಾಷ, ರಾಜ್ಯ ಉಪಾಧ್ಯಕ್ಷ ತನ್ನೀರ್, ಸಹ ಕಾರ್ಯದರ್ಶಿ ಸಲೀಂ ಹಾಸನ್, ಸತ್ತಾರ ಗುಲಾಬ್, ಸೈಯದ್ ಫರೀದ್, ಅಮೀರ್ ಜಾನ್, ಅಕ್ಮಲ್ ಜಾವೀದ್, ಸಮೀರ್ ಮೊದಲಾದವರಿದ್ದರು.

# ಜ್ಞಾನಸಾಗರ ಶಾಲೆಯಲ್ಲಿ ಅಕ್ಷರಾಭ್ಯಾಸ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಯಿ ಶಾರದೆಯನ್ನು ಪೂಜಿಸಿ ಕಲಿಕೆಗೆ ಮುನ್ನುಡಿ ಬರೆಯುವ ಅಕ್ಷರಾಭ್ಯಾಸ ಕಾರ್ಯಕ್ರಮ ಪಟ್ಟಣದ ಜ್ಞಾನಸಾಗರ ಇಂಟರ್ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಜರುಗಿತು.

ಡಾ. ಪ್ರತಿಮಾ ಜಗದೀಶ್ ಮಾತನಾಡಿ, ಮಕ್ಕಳ ಕಲಿಕೆಯಲ್ಲಿ ಪೋಷಕರ ಜವಾಬ್ದಾರಿ ಕುರಿತು ಮಾಹಿತಿ ನೀಡಿ, ಮಕ್ಕಳ ಕಲಿಕೆಯು ಸಫಲವಾಗಬೇಕಾದರೆ ಪೋಷಕರು ಮಕ್ಕಳಿಗೆ ಪೂರಕ ವಾತಾವರಣ ಕಲ್ಪಿಸಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಡಾ. ಕೆ. ನಾಗೇಶ್ ಮಾತನಾಡಿ, ನಮ್ಮ ಶಾಲೆಯು ಮಕ್ಕಳಲ್ಲಿ ಸಂಸ್ಕಾರಯುಕ್ತ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಶಿಕ್ಷಣ ಎಂಬುದು ಒಂದು ತಪಸ್ಸು, ಈ ತಪಸ್ಸಿಗೆ ಪ್ರಾರಂಭಿಕ ಹಂತ ಅಕ್ಷರಾಭ್ಯಾಸ. ನಮ್ಮ ಶಾಲೆಯ ಅಭಿವೃದ್ಧಿಗೆ ಪೋಷಕರ ಸಹಕಾರ, ಪ್ರೋತ್ಸಾಹ ಅವಶ್ಯಕ. ನಮ್ಮ ಸಂಸ್ಥೆ ಉತ್ತಮ ಶಿಕ್ಷಣ ಸೇವೆ ನೀಡುತ್ತಾ ಬಂದಿದೆ ಎಂದು ಹೇಳಿದರು.

ಸಂಸ್ಥೆಯ ಕಾರ್ಯದರ್ಶಿ ಡಾ. ಭಾರತಿ ನಾಗೇಶ್ ಮಾತನಾಡಿ, ನಮ್ಮ ಸಂಸ್ಥೆಯ ಮೇಲೆ ನಂಬಿಯಿಟ್ಟು ಶಾಲೆಗೆ ತಮ್ಮ ಮಕ್ಕಳನ್ನು ದಾಖಲು ಮಾಡಿದ ಎಲ್ಲಾ ಪೋಷಕರಿಗೆ ಅಭಿನಂದನೆ ತಿಳಿಸಿದರು.

ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ಡೀನ್ ಡಾ. ಸುಜಾ ಪಿಲಿಫ್, ಆಡಳಿತಾಧಿಕಾರಿಗಳಾದ ಪಿಲಿಫ್, ಸಂಸ್ಥೆಯ ನಿರ್ದೇಶಕರಾದ ಲಕ್ಷ್ಮೇಗೌಡ, ನಾರಾಯಣ್ ಹಾಗೂ ಇತರರಿದ್ದರು.

# ಮಾದಕ ವಸ್ತು ಕಳ್ಳ ಸಾಗಣೆ ಮಾಡಿದರೆ ಶಿಸ್ತು ಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಬೇಲೂರು: ಸಾಮಾಜಿಕ ಪೀಡುಗುಗಳಲ್ಲಿ ಮಾದಕ ವಸ್ತುಗಳ ವ್ಯಸನ ಅತ್ಯಂತ ಅಪಾಯಕಾರಿಯಾಗಿದೆ. ಯುವಕರ ಭವಿಷ್ಯವನ್ನು ಹಾಳು ಮಾಡುವ ಮಾದಕ ವಸ್ತು ಕಳ್ಳಸಾಗಣೆ ಮಾಡಿದರೆ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು ಎಂದು ಅರಸೀಕೆರೆ ಡಿವೈಎಸ್‌ಪಿ ಗೋಪಿ ಎಚ್ಚರಿಕೆ ನೀಡಿದರು.

ಪಟ್ಟಣ ಬಸ್ ನಿಲ್ದಾಣ ಬಳಿ ಬೇಲೂರು ಪೊಲೀಸ್ ಠಾಣೆ ವತಿಯಿಂದ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಅಂಗವಾಗಿ ಜಾಥಾ ಮತ್ತು ಜಾಗೃತಿ ಅಭಿಯಾನಕ್ಕೆ ಚಾಲನೆ ಮಾತನಾಡಿದ ಅವರು, ಯುವ ಸಮುದಾಯದಿಂದ ಮಾತ್ರ ಸದೃಢ ದೇಶವನ್ನು ನಿರ್ಮಿಸಲು ಸಾಧ್ಯ. ಯುವಕರು ದೇಶದ ಆಸ್ತಿ. ಆದರೆ ದುಶ್ಚಟಗಳಿಗೆ ದಾಸರಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದರು.

ಮಾದಕ ದ್ರವ್ಯಗಳ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧದ ಅಂತಾರಾಷ್ಟ್ರೀಯ ದಿನವನ್ನು ಪ್ರತಿವರ್ಷ ಜೂ. 26 ರಂದು ವಿಶ್ವಾದ್ಯಂತ ಆಚರಿಸಲಾಗುತ್ತದೆ. ಮಾದಕ ವಸ್ತುಗಳ ಮಾರಾಟ ಹಾಗೂ ಸಾಗಾಣಿಕೆ ಕಾನೂನು ಬಾಹಿರ. ಇಂತಹ ಮಾಫಿಯಾಕ್ಕೆ ಕುಮ್ಮಕ್ಕು ನೀಡುವವರ ವಿರುದ್ಧ ಪ್ರಕರಣ ದಾಖಲಿಸಲು ಇಲಾಖೆ ಮಿನಮೇಷ ಎಣಿಸುವುದಿಲ್ಲ. ಸಮಾಜಕ್ಕೆ ಕಂಟಕ ಪ್ರಾಯವಾದ ಮಾದಕ ವಸ್ತುಗಳ ವ್ಯಸನ ಮುಕ್ತ ಮಾಡಲು ಮತ್ತು ಅಕ್ರಮ ಸಾಗಾಣಿಕೆಯನ್ನು ಬುಡ ಸಮೇತ ಕಿತ್ತು ಹಾಕಲು ಇಲಾಖೆ ಜೊತೆಯಲ್ಲಿ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಬೇಲೂರು ಸಿಪಿಐ ರೇವಣ್ಣ ಮಾತನಾಡಿ, ಯುವಕರು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಲು ಮತ್ತು ಸದೃಢ ಸಮಾಜ ನಿರ್ಮಿಸಲು ಮೊದಲು ವಿದ್ಯಾಭ್ಯಾಸದ ಕಡೆ ಗಮನ ನೀಡಬೇಕಿದೆ. ನಿಮ್ಮನ್ನು ನಂಬಿದ ಪೋಷಕರಿಗೆ ಯಾವುದೇ ದ್ರೋಹ ಎಸಗದೆ ಶಿಕ್ಷಣದಲ್ಲಿ ಉತ್ತಮ ಸಾಧನೆ ಮೂಲಕ ಉದ್ಯೋಗ ಪಡೆದು ಕುಟುಂಬದ ಜವಾಬ್ದಾರಿ ಹಾಗೂ ದೇಶಕ್ಕೆ ಕೊಡುಗೆ ನೀಡಲು ಮುಂದಾಗಬೇಕಿದೆ ಎಂದರು.

ಹವ್ಯಾಸವಾಗಿ ಆರಂಭವಾಗುವ ದುಶ್ಚಟಗಳು ಬದುಕಿಗೆ ಕೊಡಲಿ ಪೆಟ್ಟು ನೀಡಲಿವೆ. ಸಮಾಜಕ್ಕೆ ಕಂಟಕವಾಗುತ್ತಾ ದೇಹದ ಆರೋಗ್ಯವನ್ನು ಕೆಡಿಸಿಕೊಂಡು ಅನಾರೋಗ್ಯದಿಂದ ನರಳುವ ಹೀನ ಸ್ಥಿತಿ ಬರುವ ಹಿನ್ನೆಲೆಯಲ್ಲಿ ಯುವ ಜನತೆ ಮತ್ತು ಸಾರ್ವಜನಿಕರು ಯಾವ ಕಾರಣಕ್ಕೂ ಮಾದಕ ವಸ್ತುಗಳಿಗೆ ಮಾನ್ಯತೆ ನೀಡಬಾರದು. ಇಂತಹ ಕೃತ್ಯಗಳನ್ನು ಎಸೆಗುವವರ ಜಾಲವನ್ನು ಪತ್ತೆಗೆ ಜನರು ಸಹಕರಿಸಬೇಕಿದೆ ಎಂದರು.

ಪೊಲೀಸ್ ಸಿಬ್ಬಂದಿ ದೇವರಾಜ್ ಇತರರಿದ್ದರು.

# ಸಕಲೇಶಪುರ ರೈತ ಭವನದಲ್ಲಿ ಖಾಝಿ ಮುಲಾಖಾತ್ ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಜಿಲ್ಲಾ ಸಂಯುಕ್ತ ಜಮಾಅತ್‌ನ ಖಾಝಿ ಮಾಣಿ ಉಸ್ತಾದ್ ನೇತೃತ್ವದಲ್ಲಿ ರೈತ ಭವನದಲ್ಲಿ ಖಾಝಿ ಮುಲಾಖಾತ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಖಾಝಿ ಮಾಣಿ ಉಸ್ತಾದ್ ಮಾತನಾಡಿ, ಮರಣಕ್ಕೆ ಸಮಯವಿಲ್ಲ. ಜೀವತಾವಧಿಯಲ್ಲಿ ಒಳಿತು ಮಾಡುವುದು ಮುಖ್ಯ. ಇಸ್ಲಾಮ್‌ಗೆ ಒಂದು ಚೌಕಟ್ಟು ಇದ್ದು, ಅದರಲ್ಲಿ ಬದುಕಬೇಕು. ರಾಜ ಮಹಾರಾಜರು ಮತ್ತು ನಾಯಕರು ಧರ್ಮ ಉಳಿಸಲು ತಮ್ಮ ಎಲ್ಲವನ್ನೂ ಧಾನ-ಧರ್ಮ ಕಾರ್ಯಕ್ಕೆ ಅರ್ಪಿಸಿದ್ದಾರೆ ಎಂದು ತಿಳಿಸಿದರು.

ಧಾರ್ಮಿಕ ಪಂಡಿತ ಹುಸೈನ್ ಸಅದಿ ಕೆ.ಸಿ. ರೋಡ್ ಮಾತನಾಡಿ, ಬದುಕಿನಲ್ಲಿ ಶಾಂತಿ ಮತ್ತು ನೆಮ್ಮದಿ ತ್ಯಾಗ ಮತ್ತು ಸೇವೆಯಿಂದ ಸಿಗುತ್ತದೆ. ಧರ್ಮವನ್ನು ಉಳಿಸಿಕೊಳ್ಳುವುದು ಅವಶ್ಯ. ಜೀವನದಲ್ಲಿ ಸಮಾಧಾನ ಬಯಸುವರೆಗೆ ಸ್ವಾರ್ಥವನ್ನು ತೊರೆಯಬೇಕು. ಐಶ್ವರ್ಯ ಸಿಕ್ಕರೆ ಎಲ್ಲವನ್ನು ಮರೆಯುವ ಸ್ಥಿತಿ ಬರುತ್ತದೆ. ದೇವನ ಭಯದಲ್ಲಿ ಬದುಕಬೇಕು. ಧಾರ್ಮಿಕ ಪಂಡಿತರು ಮತ್ತು ಸಮುದಾಯದ ನಾಯಕರು ಒಗ್ಗೂಡಿ ಧರ್ಮ ಉಳಿಸಲು ಸಮಾಲೋಚನೆ ನಡೆಸಬೇಕು, ಕಾರ್ಯಕ್ರಮದಲ್ಲಿ ಸಮುದಾಯದ ಒಳಿತಿಗೆ ಧಾರ್ಮಿಕ ಪಂಡಿತರು ಸಕ್ರಿಯರಾಗಬೇಕು ಎಂಬ ಕರೆ ನೀಡಿದರು. ವೇದಿಕೆಯಲ್ಲಿ ಶಾಫಿ ನೈಮಿ ಮಾರನಹಳ್ಳಿ ತಙಳ್, ಉಮರ್ ಸಖಾಫಿ ಎಡಪಾಲ, ಡಿ.ಕೆ. ಉಮರ್ ಸಖಾಫಿ, ಸಯ್ಯದ್ ಅಲವಿ ಸಖಾಫಿ ಷರೀಫ್ ಮಿಸ್ಬಾಯಿ ಸೇರಿ ಹಾಗೂ ಇತರರಿದ್ದರು.

# ಸ್ತ್ರೀಯರು ಆರೋಗ್ಯಕ್ಕೆ ಆದ್ಯತೆ ನೀಡಿ : ಪ್ರಮೋದ್ ಕುಮಾರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ವಿದ್ಯಾರ್ಥಿನಿಯರಿಗೆ ಹೆಚ್‌ಪಿವಿ ಲಸಿಕೆ ಹಾಕುವುದರಿಂದ ಭವಿಷ್ಯದಲ್ಲಿ ಆರೋಗ್ಯವಂತರಾಗಿ ದೇಶಕ್ಕೆ ದೊಡ್ಡ ಕೊಡುಗೆ ನೀಡಬಹುದು ಎಂದು ಡಿವೈಎಸ್‌ಪಿ ಪ್ರಮೋದ್ ಕುಮಾರ್ ಅಭಿಪ್ರಾಯಪಟ್ಟರು.

ರಾಧಮ್ಮ ಜನಸ್ಪಂದನ ಸಂಸ್ಥೆ ವತಿಯಿಂದ ಮಗ್ಗೆ ಗ್ರಾಮದ ಇನ್ ಸ್ಪೈರ್ ಇಂಟರ್ನ್ಯಾಷನಲ್ ಶಾಲೆ ಆವರಣದಲ್ಲಿ ಏರ್ಪಡಿಸಲಾಗಿದ್ದ ಸ್ತನ ಕ್ಯಾನ್ಸರ್ ಪತ್ತೆ ಹಚ್ಚಲು ಮಹಿಳೆಯರಿಗೆ ಉಚಿತ ಮೆಮೊಗ್ರಫಿ ಸ್ಕ್ಯಾನಿಂಗ್ ಮತ್ತು ಆಲೂರು ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಹೆಚ್‌ಪಿವಿ ಲಸಿಕೆ ಹಾಕಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಣ ಎಷ್ಟಿದ್ದರೇನು, ಆರೋಗ್ಯ ಉಳ್ಳವನೇ ಶ್ರೀಮಂತ. ಗ್ರಾಮೀಣ ಭಾಗದಲ್ಲಿ ಸಮಾಜ ಸೇವೆಯನ್ನು ಮಾಡಲು ಇಂದಿನ ಕಾಲಘಟ್ಟದಲ್ಲಿ



ಯುವಕರು ಮುಂದೆ ಬರುವುದು ವಿರಳ. ಅಂತಹ ಸ್ಥಿತಿಯಲ್ಲಿ ಹೇಮಂತ್ ಕುಮಾರ್ ಅವರು ತಮ್ಮ ತಾಯಿ ಹೆಸರಿನಲ್ಲಿ ಸಂಸ್ಥೆಯನ್ನು ತೆರೆದು, ಮಹಿಳೆಯರ ಆರೋಗ್ಯ ದೃಷ್ಟಿಯಿಂದ ಚಿಕಿತ್ಸಾ ಶಿಬಿರ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಸ್ತ್ರೀ ವೈದ್ಯ ತಜ್ಞರ ಸಂಘದ ಅಧ್ಯಕ್ಷೆ ಡಾ. ಪ್ರೇಮಲತಾ ಮಾತನಾಡಿ, ಮಹಿಳೆಯರು ಚಿನ್ನಕ್ಕೆ, ಮದುವೆಗೆ ಹಣ ಖರ್ಚು ಮಾಡುತ್ತಾರೆ. ಆರೋಗ್ಯ ಸಂಪೂರ್ಣ ಕೆಟ್ಟು ಹೋದ ಮೇಲೆ ಆಸ್ಪತ್ರೆಗೆ ಬರುತ್ತಾರೆ. ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಪ್ರಜ್ಞಾವಂತರಾಗಬೇಕು ಎಂದರು.

ಹಾಸನ ಮಲೆನಾಡು ನರ್ಸಿಂಗ್ ಹೋಂ ಡಾ. ಸಾವಿತ್ರಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆ ಮಾಡಿ ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಿರುವುದನ್ನು ಮಹಿಳೆಯರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ರಾಧಮ್ಮ ಜನಸ್ಪಂದನ ವೇದಿಕೆ ಅಧ್ಯಕ್ಷ ಹೇಮಂತಕುಮಾರ್ ಮಾತನಾಡಿ, ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಹಾಕಲು ಆಸ್ಪತ್ರೆಯಲ್ಲಿ 2000 ವರೆಗೂ ದರ ಇದೆ. ಆಲೂರು ತಾಲ್ಲೂಕಿನ ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡವರಿಗೆ ಕೇವಲ 500 ರೂ. ದರದಲ್ಲಿ ಮಾಡಿಸುತ್ತಿದ್ದೇನೆ ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

## ಇತಿಹಾಸದಲ್ಲಿ ಈ ದಿನ

### ಜೂನ್-26

**1975:** ಭಾರತದಲ್ಲಿ ಆಪಾತ್ಕಾಲ ಘೋಷಣೆ: ಭಾರತದ ಇತಿಹಾಸದಲ್ಲೇ ಅತ್ಯಂತ ಮಹತ್ವದ ದಿನಗಳಲ್ಲಿ ಒಂದಾಗಿದೆ. ಪ್ರಧಾನಿ ಇಂದಿರಾ ಗಾಂಧಿ ಅವರು ದೇಶಾದ್ಯಂತ ಆಪಾತ್ಕಾಲವನ್ನು ಘೋಷಿಸಿದರು.

**1974:** ಜಾರ್ಖಂಡ್ ಮುಕ್ತಿ ಮೋರ್ಚಾ ಸ್ಥಾಪನೆ: ಶಿಬು ಸೋರೇನ್ ಅವರ ನೇತೃತ್ವದಲ್ಲಿ ಜಾರ್ಖಂಡ್ ಮುಕ್ತಿಮೋರ್ಚಾ ಎಂಬ ರಾಜಕೀಯ ಪಕ್ಷ ಸ್ಥಾಪನೆಯಾಯಿತು. ಈ ಪಕ್ಷ ಜಾರ್ಖಂಡ್ ರಾಜ್ಯದ ಸ್ವಾಯತ್ತತೆಗಾಗಿ ಹೋರಾಟ ನಡೆಸಿತು.

**1945:** ಸಂಯುಕ್ತ ರಾಷ್ಟ್ರ ಸಂಘದ ಸಾಂವಿಧಾನಿಕ ಡಾಕ್ಯುಮೆಂಟ್ ಅಂಗೀಕಾರ: ಅಮೇರಿಕಾದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ 50 ರಾಷ್ಟ್ರಗಳು ಸೇರಿ ಸಂಯುಕ್ತ ರಾಷ್ಟ್ರ ಸಂಘದ ಚಾರ್ಟರ್ ಗೆ ಸಹಿ ಹಾಕಿದವು.

**1963:** ಕೆನ್ನಡಿ-ಕ್ರುಶ್ಚೇವ್ 'ಹಾಟ್ ಲೈನ್' ಸ್ಥಾಪನೆ: ಅಮೇರಿಕಾ ಮತ್ತು ಸೋವಿಯತ್ ಯುನಿಯನ್ ನಡುವೆ ನೇರ ಸಂವಹನ ವ್ಯವಸ್ಥೆ ಸ್ಥಾಪನೆಯಾಯಿತು. ಶೀತಲ ಯುದ್ಧದ ಸಮಯದಲ್ಲಿ ದ್ವಿಪಕ್ಷೀಯ ಭಿನ್ನಾಭಿಪ್ರಾಯಗಳನ್ನು ತಡೆಯಲು ಇದು ಮುಖ್ಯ ಸಾಧನವಾಯಿತು.

**ಜನನ**

**1909:** ಕೊಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಸೇವೆ ಸಲ್ಲಿಸಿದ ದೇವೇಂದ್ರನಾಥ ಬಂಡ್ಯೋಪಾಧ್ಯಾಯ.

**ಮರಣ**

**1977:** ಗ್ಯಾನಿ ಜೀವನ್ ಸಿಂಗ್, ಪ್ರಸಿದ್ಧ ಶಿಖ್ ಧಾರ್ಮಿಕ ನೇತಾರ ಮತ್ತು ಲೇಖಕರು. ಧರ್ಮ ಮತ್ತು ಭಾಷಾ ಹಕ್ಕುಗಳಿಗಾಗಿ ಹೋರಾಡಿದವರು.

**1980:** ಬಿ.ಜಿಎಲ್. ಸ್ವಾಮಿ, ಖ್ಯಾತ ಭಾರತೀಯ ವನಸ್ಪತಿ ಶಾಸ್ತ್ರಜ್ಞ ಹಾಗೂ ಬರಹಗಾರ.

**2009:** ಮೈಕೆಲ್ ಜಾಕ್ಸನ್, ಪಾಪ್ ಸಂಗೀತದ ಸಾಮ್ರಾಟ್ ಎಂಬ ಖ್ಯಾತಿ ಪಡೆದ ಅಮೇರಿಕ ಗಾಯಕ, ನೃತ್ಯಗಾರ ಮತ್ತು ಗೀತ ರಚನೆಕಾರ.

**1969:** ಫಾಸ್ಟೋ ಚಿಯಗರೇಲಿ, ಇಟಲಿಯ ಪ್ರಸಿದ್ಧ ಸಂಗೀತ ನಿರ್ದೇಶಕ ಮತ್ತು ಸಂಗೀತ ತಜ್ಞ.

# ತುರ್ತು ಪರಿಸ್ಥಿತಿ: ಪ್ರಜಾಪ್ರಭುತ್ವದ ಕತ್ತಲೆಯ ಅಧ್ಯಾಯ

ಕನ್ನಡ ಪೋಸ್ಟ್ ವಿಶೇಷ

1975ರ ಜೂನ್ 25ರ ರಾತ್ರಿ, ಭಾರತದ ಇತಿಹಾಸದಲ್ಲಿ ಅತ್ಯಂತ ವಿವಾದಾತ್ಮಕ ಮತ್ತು ಸ್ಮರಣೀಯ ದಿನ. ಪ್ರಧಾನಿ ಇಂದಿರಾ ಗಾಂಧಿ ಅವರು ರಾಷ್ಟ್ರಪತಿ ಫಖ್ರುದ್ದೀನ್ ಅಲಿ ಅಹ್ಮದ್ ಅವರ ಅನುಮತಿಯೊಂದಿಗೆ ತುರ್ತು ಪರಿಸ್ಥಿತಿ ಘೋಷಿಸಿದರು. ಈ ತುರ್ತು ಪರಿಸ್ಥಿತಿ ಮೂಲತಃ ಆಂತರಿಕ ಅಶಾಂತಿಗಾಗಿ ಘೋಷಿತವಾಯಿತು ಮತ್ತು 1977ರ ಮಾರ್ಚ್ 21ರವರೆಗೆ ದೇಶಾದ್ಯಂತ ಜಾರಿಯಲ್ಲಿತ್ತು.



### ದೇಶಾದ್ಯಂತ ಪ್ರತಿಭಟನೆ

ಜಯಪ್ರಕಾಶ ನಾರಾಯಣ ನೇತೃತ್ವದಲ್ಲಿ ಸಂಪೂರ್ಣ ಕ್ರಾಂತಿ ಚಳವಳಿ ಶುರುವಾಯಿತು. ದೇಶದಾದ್ಯಂತ ಶಾಂತಿಪೂರ್ಣ ಪ್ರತಿಭಟನೆಗಳು, ಬದಲಾವಣೆಗಾಗಿ ಒತ್ತಾಯಗಳು, ಆಂದೋಲನಗಳು ನಡೆಯುತ್ತಿದ್ದವು.

### ಅಲಾಹಾಬಾದ್ ಕೋರ್ಟ್ ತೀರ್ಪು

ಇಂದಿರಾ ಗಾಂಧಿ 1971ರ ಲೋಕಸಭೆ ಚುನಾವಣೆಯನ್ನು ಅನ್ಯಾಯದಂತಹ ಪ್ರಚಾರ ವಿಧಾನಗಳಿಂದ ಗೆದ್ದಿದ್ದಾರೆ ಎಂಬ ಆರೋಪ ಕೇಳಿಬಂದಿತು. ಈ ಕ್ರಮದ ವಿರುದ್ಧ ಇಂದಿರಾ ಗಾಂಧಿ ಅವರ ಪ್ರತಿಸ್ಪರ್ಧಿ ನ್ಯಾಯಾಲಯ ಮೆಟ್ಟಿಲೇರಿದ್ದರು. ಈ ಹಿನ್ನೆಲೆಯಲ್ಲಿ ಅಲಹಾಬಾದ್ ಹೈಕೋರ್ಟ್ ಇಂದಿರಾ ಗಾಂಧಿಯ ಆಯ್ಕೆ ರದ್ದುಪಡಿಸಿತು. ಮತ್ತು 6 ವರ್ಷಗಳವರೆಗೆ ಚುನಾವಣೆ ಸ್ಪರ್ಧಿಸಲು ನಿರ್ಬಂಧಿಸಿತು. ಈ ತೀರ್ಪಿನಿಂದ ಇಂದಿರಾ ಗಾಂಧಿಗೆ ರಾಜಕೀಯವಾಗಿ ದೊಡ್ಡ ಆಘಾತವಾಯಿತು.

### ಲೋಪ ಮತ್ತು ಟೀಕೆಗಳು

ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಸರ್ಕಾರದ ವರ್ತನೆಗೆ ಭಾರೀ ಟೀಕೆಗಳು ಬಂದವು. ಮಾನವ ಹಕ್ಕುಗಳ ಉಲ್ಲಂಘನೆ, ಬಲಾತ್ಕಾರಿತ ಬಂಧನೆಗಳು, ಭಯದ ವಾತಾವರಣ ಸರ್ಕಾರದ ವಿರುದ್ಧ ಜನರ ಅಸಂತೋಷವನ್ನು ಹೆಚ್ಚಿಸಿದವು. ಸಂವಿಧಾನದ ಪ್ರಜಾಪ್ರಭುತ್ವಾತ್ಮಕ ಮೂಲಸಿದ್ಧಾಂತಗಳಿಗೆ ಧಕ್ಕೆಯಾಗಿತ್ತು.

### ತುರ್ತು ಪರಿಸ್ಥಿತಿಯ ಮುಖ್ಯ ಅಂಶಗಳು

- ❒ ಮಾಧ್ಯಮದ ಮೇಲೆ ಸೆನ್ಸಾರ್: ಪತ್ರಿಕೆಗಳು, ಟಿವಿ, ರೇಡಿಯೋಗಳ ವರದಿಗಳಿಗೆ ಸರ್ಕಾರದ ಅನುಮತಿ ಅಗತ್ಯವಾಯಿತು.
- ❒ ಪ್ರತಿಪಕ್ಷ ನಾಯಕರ ಬಂಧನ: ಜಯಪ್ರಕಾಶ ನಾರಾಯಣ, ಮುರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಲಾಲಕೃಷ್ಣ ಅಡ್ವಾಣಿ ಸೇರಿದಂತೆ ಹಲವರು ಬಂಧಿತರಾದರು.
- ❒ ಮೂಲಭೂತ ಹಕ್ಕುಗಳ ರದ್ದುಪಡಿಕೆ: ವ್ಯಕ್ತಿಗತ ಸ್ವಾತಂತ್ರ್ಯ, ಅಭಿವ್ಯಕ್ತಿ ಹಕ್ಕು, ನ್ಯಾಯಾಲಯದ ಶರಣು ಹಕ್ಕುಗಳನ್ನೂ ಸ್ಥಗಿತಗೊಳಿಸಲಾಯಿತು.
- ❒ ಸಂವಿಧಾನ ಬದಲಾವಣೆಗಳು: 42ನೇ ತಿದ್ದುಪಡಿ ಮೂಲಕ ಸಂವಿಧಾನದಲ್ಲಿ ಪ್ರಮುಖ ಬದಲಾವಣೆಗಳು ತರಲಾಯಿತು.
- ❒ ಸಮರ್ಥನೆಗಾಗಿ ಯೋಜನೆಗಳು: ಜನಸಂಖ್ಯೆ ನಿಯಂತ್ರಣ, ಶಿಸ್ತಿನ ನಿಲುವು, ಅಭಿವೃದ್ಧಿಯ ವೇಗವೆಂಬ ಮೌಖಿಕ ವಾದಗಳನ್ನು ನೀಡಲಾಯಿತು.

### ತುರ್ತು ಪರಿಸ್ಥಿತಿ ಅಂತ್ಯ

1977ರಲ್ಲಿ ತುರ್ತು ಪರಿಸ್ಥಿತಿಯ ಅಂತ್ಯವಾಯಿತು ಮತ್ತು ಲೋಕಸಭೆ ಚುನಾವಣೆಗಳು ನಡೆಯಿತು. ಜನತೆ ತುರ್ತು ಪರಿಸ್ಥಿತಿಗೆ ತೀವ್ರ ಪ್ರತಿಕ್ರಿಯೆ ತೋರಿಸಿದರು. ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲನ್ನು ಕಂಡಿತು. ಜನತಾ ಪಕ್ಷ ಅಧಿಕಾರಕ್ಕೆ ಬಂತು. ಇಂದಿರಾ ಗಾಂಧಿ ಮತ್ತು ಅವರ ಪುತ್ರ ಸಂಜಯ ಗಾಂಧಿ ಮೊದಲ ಬಾರಿಗೆ ರಾಜಕೀಯ ಸೋಲನ್ನು ಅನುಭವಿಸಿದರು.

1975ರ ತುರ್ತು ಪರಿಸ್ಥಿತಿ ಭಾರತೀಯ ಪ್ರಜಾಪ್ರಭುತ್ವದ ಪರೀಕ್ಷೆಯಾದ ಕಾಲ. ಇದು ಒಂದು ಬಗೆಯಲ್ಲಿ ಸ್ಮರಣೆ




ಪ್ರಜಾಪ್ರಭುತ್ವದ ಮೌಲ್ಯಗಳು ಎಷ್ಟು ನವೀನ ಮತ್ತು ನಾಜೂಕು ಎಂಬುದರ ಅರಿವಿಗೆ ಬರಲು ಕಾರಣವಾಯಿತು. ಈ ಘಟನೆ ಮುಂದೆ ಭಾರತದ ಸಂವಿಧಾನ ಮತ್ತು ರಾಜಕೀಯತೆಯನ್ನು ಮತ್ತಷ್ಟು ಪಾಠ ಕಲಿಸಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248